**ಪಿ ಡಬ್ಲೂ : 3**

ಸಾಕ್ಷಿಗೆ ದಿನಾಂಕಃ **18.08.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರರ ಪರಃ ಶ್ರೀ ಕೆ.ವಿ.ಎಸ್ ವಕೀಲರಿಂದ:**

ನಾನು ವ್ಯವಸಾಯ ವೃತ್ತಿಯನ್ನು ಮಾತ್ರ ಮಾಡುತ್ತೇನೆ. ಅರ್ಜಿದಾರರು ನನಗೆ ದಾಯಾದಿ ಅಗ ಬೇಕು. ಅರ್ಜಿದಾರರು ನನ್ನ ದೊಡ್ಡಪ್ಪನ ಮಗ ಅಗಿರುತ್ತಾರೆ. ನನ್ನ ತಂದೆಗೆ ಮಂಚುಗೌಡ ಮತ್ತು ನಾಗರಾಜು ಸಹೋದರರಾಗಿರುತ್ತಾರೆ. ಅರ್ಜಿದಾರರಿಗೆ ಮಂಚುಗೌಡ ಚಿಕ್ಕಪ್ಪ ಅಗಬೇಕು. ಅರ್ಜಿದಾರರ ತಂದೆಯ ಹೆಸರು ಮಾದೇಗೌಡ , ಅವರ ತಾಯಿಯ ಹೆಸರು ನಂಜಮ್ಮ. ಅರ್ಜಿದಾರರ ತಾತ ಮತ್ತು ಅಜ್ಜಿಯ ಹೆಸರು ನಂಜೇಗೌಡ ಮತ್ತು ಚೆನ್ನಮ್ಮ ಎಂದರೆ ಸರಿ. ನಂಜೇಗೌಡರಿಗೆ ಮಾದಮ್ಮ ಎಂಬ ಮೊದಲ ಪತ್ನಿ ಇದ್ದರು ಎಂದರೆ ಅವರಿಗೆ ಚೆನ್ನಮ್ಮ ಎಂಬ ಪತ್ನಿ ಮಾತ್ರ ಇದ್ದರು. ಸದರಿ ಚೆನ್ನಮ್ಮ ರವರು ನಂಜೇಗೌಡರಿಗೆ ಎರಡನೇ ಪತ್ನಿ ಎಂದರೆ ಒಬ್ಬರೇ ಪತ್ನಿ ಇದ್ದರು. ಅರ್ಜಿದಾರರು ವಾರಸು ಪ್ರಮಾಣಪತ್ರವನ್ನು ಕೋರಿ ಈ ಅರ್ಜಿ ಸಲ್ಲಿಸಿರುತ್ತಾರೆ. ಎ.ಸಿ. ರವರ ನ್ಯಾಯಾಲಯದಲ್ಲಿ ಇದೇ ವಿಷಯಕ್ಕೆ ಮೇಲ್ಮನವಿ ಇತ್ತು ಎಂದರೆ ಸರಿ. ಅದರಲ್ಲಿ ನಾನು ಸಾಕ್ಷ್ಯ ನುಡಿದಿರುವುದಿಲ್ಲ. ಮಾದೇಗೌಡರಿಗೆ ಮೊದಲನೇಲ ಪತ್ನಿ ನಂಜಮ್ಮ ಮತ್ತು ಎರಡನೇ ಪತ್ನಿ ಚೆನ್ನಮ್ಮ ಎಂದರೆ ಸರಿ. ಮೊದಲನೇ ಪತ್ನಿ ನಂಜಮ್ಮ ರವರ ಮಗ ಅರ್ಜಿದಾರರ ಎಂದರೆ ಸರಿ. ನಂಜೇಗೌಡರ ಎರಡನೇ ಪತ್ನಿ ಚೆನ್ನಮ್ಮ ರವರಿಗೆ ನಂಜಮ್ಮ ಎಂಬ ಮಗಳು ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

2) ಅರ್ಜಿದಾರರ ತಂದೆಯ ಮಾದೇಗೌಡ ಎಂದರೆ ಸರಿ. ಸದರಿ ಮಾದೇಗೌಡರು ನಂಜಮ್ಮ ರವರ ಪತಿ ಎಂದರೆ ಸರಿ. ನಂಜೇಗೌಡರಿಗೆ ನನ್ನ ಪ್ರಕಾರ ಚೆನ್ನಮ್ಮ ಎಂಬ ಪತ್ನಿ ಇದ್ದರು. ಸದರಿ ಚೆನ್ನಮ್ಮ ರವರಿಗೆ ನಂಜಮ್ಮ ಎಂಬ ಒಬ್ಬರೇ ಮಗಳು ಎಂದರೆ ಸರಿ. ಸದರಿ ನಂಜಮ್ಮ ರವರ ಪತಿಯ ಹೆಸರು ಮರಿಮಾದೇಗೌಡ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮರಿಮಾದೇಗೌಡರು ಕುಂದೂರು ಗ್ರಾಮದವರು ಎಂದರೆ ನನಗೆ ಗೊತ್ತಿರುವುದಿಲ್ಲ. ಎದುರುದಾರರು ನನ್ನ ಸಹೋದರತ್ತೆ ಮಕ್ಕಳು ಅಗಿರುತ್ತಾರೆ. ನನ್ನ ತಂದೆಗೆ ನಂಜಮ್ಮ ಮತ್ತು ಗೌರಮ್ಮ ಎಂಬ ಸಹೋದರಿಯರು ಇರುತ್ತಾರೆ. ಸದರಿ ಇಬ್ಬರು ನನ್ನ ತಂದೆಯ ತಂಗಿಯರು ಅಗಿರುತ್ತಾರೆ. ಎದುರುದಾರರು ನನ್ನ ಸ್ವಂತ ಸಹೋದರತ್ತೆ ಮಕ್ಕಳು ಅಗಿರುವುದಿಲ್ಲ. ಎದುರುದಾರರ ತಂದೆ ತಾಯಿ ಹೆಸರು ನನಗೆ ಗೊತ್ತಿರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ